ಭಗವಂತನ ನೆಲೆ

ಈಶ್ವರ ತತ್ತ್ವಕ್ಕಾಗಿ ಹುಡುಕುತ್ತಿದ್ದರೆ ಅದನ್ನು ಮಾನವನಲ್ಲಿ ಹುಡುಕು. ಆತ ಮಾನವನಲ್ಲಿ ವಿಶೇಷವಾಗಿ ವ್ಯಕ್ತವಾಗಿದ್ದಾನೆ. ಯಾವ ಮನುಷ್ಯನಲ್ಲಿ ನೀನು ಊರ್ಜಿತ ಭಕ್ತಿಯನ್ನು , ಎಂದರೆ ಪ್ರೇಮ-ಭಕ್ತಿಯು ಉಕ್ಕಿ ಹರಿಯುತ್ತಿರುವುದನ್ನು ನೋಡುವೆಯೋ, ಯಾರು ಆತನ ಪ್ರೇಮದಿಂದ ಮತ್ತ ನಾಗಿದ್ದಾನೋ ಆತನ ಮೂಲಕ ನಿಸ್ಸಂದೇಹವಾಗಿ ಭಗವಂತ ಅವರಿಸಿದ್ದಾನೆ ಎಂಬುದನ್ನು ತಿಳಿ.

(ವಚನವೇದ, ಸಂ.೨, ಪು.೨೫೧)

ಕೇವಲ ಸಚ್ಚಿದಾನಂದನೇ ಗುರು. ಮನುಷ್ಯ ಗುರುವಿನ ಪಟ್ಟ ಧರಿಸಿ ಜನರಲ್ಲಿ ಆತ್ಮಜಾಗೃತಿಯನ್ನುಂಟು ಮಾಡಿದ್ದೇ ಆದರೆ, ಆಗ ತಿಳಿದು ಕೊಳ್ಳಬೇಕು, ಸಚ್ಚಿದಾನಂದನೇ ಆ ರೂಪ ಧರಿಸಿದ್ದಾನೆ ಎಂಬುದಾಗಿ. ಗುರು ಒಬ್ಬ ಸ್ನೇಹಿತ ಇದ್ದ ಹಾಗೆ. ಆತ ಕೈಹಿಡಿದು ಕರೆದುಕೊಂಡು ಹೋಗುತ್ತಾನೆ. ಭಗವಂತನ ದರ್ಶನವಾದ ನಂತರ ಗುರು-ಶಿಷ್ಯರ ಭೇದವಿರದು.

(ವಚನವೇದ, ಸಂ.೧, ಪು.೧೮೪)

ಬ್ರಹ್ಮ ಏನು ಎಂಬುದನ್ನು ಬಾಯಿಯಿಂದ ವರ್ಣನೆ ಮಾಡಲಾಗುವುದಿಲ್ಲ. ಎಲ್ಲವೂ ಉಚ್ಛಿಷ್ಟವಾಗಿ ಹೋಗಿವೆ — ವೇದ, ಪುರಾಣ, ತಂತ್ರ, ಷಡ್ದರ್ಶನ ಎಲ್ಲಾ. ಇವೆಲ್ಲಾ ಬಾಯಿಯಿಂದ ಹೊರಹೊಮ್ಮಿರುವುದರಿಂದ, ನಾಲಗೆ ಉಚ್ಚರಿಸಿರುವುದರಿಂದ ಉಚ್ಛಿಷ್ಟವಾಗಿವೆ. ಆದರೆ ಕೇವಲ ಒಂದು ವಸ್ತು ಮಾತ್ರ ಉಚ್ಛಿಷ್ಟವಾಗಿಲ್ಲ, ಅದೇ ಬ್ರಹ್ಮ. ಬ್ರಹ್ಮ ಎಂದರೆ ಏನು ಎಂಬುದನ್ನು ಯಾರಿಗೂ ಇದುವರೆಗೆ ವರ್ಣನೆ ಮಾಡಲಾಗಿಲ್ಲ. *(ವಚನವೇದ, ಸಂ.೧, ಪು.೪೫)*

ದೇವಾಲಯ

ಕಣ್ಣಿಗೆ ಬಿತ್ತು ಎಂದರೆ, ಭಗವಂತನೇ ಜ್ಞಾಪಕಕ್ಕೆ ಬರುತ್ತಾನೆ. ಉದ್ದೀಪನವಾಗುತ್ತದೆ. ಎಲ್ಲಿ ಆತನ ಸಂಬಂಧವಾಗಿ ಮಾತುಕತೆ ನಡೆಯುವುದೋ, ಅಲ್ಲಿ ಆತನ ಆವಿರ್ಭಾವ ಆಗುತ್ತದೆ. ಎಲ್ಲಾ ತೀರ್ಥಗಳ ಪಾವಿತ್ರ್ಯತೆ ಅಲ್ಲಿ ನೆಲೆಗೊಳ್ಳುತ್ತದೆ. ಈ ವಿಧದ ಸ್ಥಳಗಳೆಲ್ಲಾ ಭಗವಂತನನ್ನೇ ಸ್ಮರಣೆಗೆ ತರುತ್ತವೆ. *(ವಚನವೇದ, ಸಂ.೧, ಪು.೧೮೭)*

ಬ್ರಹ್ಮಜ್ಞಾನ ಬೇಕಾಗಿದ್ದರೆ ಆ ಪ್ರತಿಬಿಂಬ ಸೂರ್ಯನನ್ನು ಹಿಡಿದುಕೊಂಡು ನಿಜವಾದ ಸೂರ್ಯನ ಕಡೆಗೆ ಹೋಗು. ನಮ್ಮ ಪ್ರಾರ್ಥನೆ ಕೇಳುತ್ತಾನಲ್ಲ ಆ ಸಗುಣಬ್ರಹ್ಮ ಆತನನ್ನೇ ಕೇಳಿಕೋ, ಆತನೇ ಬ್ರಹ್ಮಜ್ಞಾನವನ್ನು ಕೊಡುತ್ತಾನೆ; ಹೇಗೆಂದರೆ ಯಾರು ಸಗುಣಬ್ರಹ್ಮನೋ ಆತನೇ ನಿರ್ಗುಣ ಬ್ರಹ್ಮ. ಯಾರು ಶಕ್ತಿಯೋ ಆತನೆ ಬ್ರಹ್ಮ. ಪೂರ್ಣ ಜ್ಞಾನ ದೊರೆತ ಮೇಲೆ ಈ ಅಭಿನ್ನತೆಯ ಅನುಭವ.



(ವಚನವೇದ, ಸಂ.೨, ಪು.೧೧೮)

ಹನುಮಂತದು ದಾಸ್ಯಭಾವ. ಆತ ರಾಮನಿಗೆ ಹೇಳಿದ: ''ಹೇ ರಾಮ, ಕೆಲವು ವೇಳೆ ನಾನು ಭಾವಿಸುತ್ತೇನೆ, ನೀನು ಪೂರ್ಣ, ನಾನು ಅಂಶ. ಇನ್ನು ಕೆಲವು ವೇಳೆ ಭಾವಿಸುತ್ತೇನೆ, ನೀನು ಪ್ರಭು ನಾನು ದಾಸ. ಆದರೆ ನನಗೆ ತತ್ತ್ವ ಜ್ಞಾನವುಂಟಾದಾಗ ಕಂಡುಬರುತ್ತದೆ, ನೀನೇ ನಾನು, ನಾನೇ ನೀನು.'' *(ವಚನವೇದ, ಸಂ.೧, ಪು.೩೭೨)*

'ಶ್ರೀರಾಮಕೃಷ್ಣ ವಚನವೇದ'ದಿಂದ